**Akashvani : Bangalore**
**National Bulletin In Kannada**
**02.10.2024 / 7.35 am**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**02.10.2024 / 7.35 am**

**<><*<><>*><>**

<u>ಮುಖ್ಯಾಂಶಗಳು</u>

೧. ಇಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಮಾಜಿ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿ ಅವರ ಜನ್ಮದಿನ- ದೇಶದೆಲ್ಲೆಡೆ ಸ್ಮರಣೆ

೨. ಮಹಾತ್ಮ ಗಾಂಧಿಯವರ ಕನಸಿನ ಭಾರತದ ಕಲ್ಪನೆಯನ್ನು ಸಾಕಾರಗೊಳಿಸಬೇಕು - ರಾಷ್ಟ್ರಪತಿ ದ್ರೌಪದಿ ಮುರ್ಮು ಕರೆ

೩. ಸ್ವಚ್ಛಭಾರತ್ ದಿವಸ್ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗಿ

೪. ಭಾರತೀಯ ನೌಕಾಪಡೆಯ ನಾವಿಕ ಸಾಗರ್ ಪರಿಕ್ರಮದ ಎರಡನೇ ಆವೃತ್ತಿಗೆ ಇಂದು ಚಾಲನೆ

**<><*<><>*><>**

ಇಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ೧೫೫ನೇ ಜನ್ಮದಿನ. ಈ ಸಂದರ್ಭದಲ್ಲಿ ರಾಷ್ಟ್ರ ಅವರಿಗೆ ಗೌರವ ಸಲ್ಲಿಸುತ್ತಿದೆ. ದೇಶಾದ್ಯಂತ ಮತ್ತು ವಿದೇಶದಲ್ಲಿರುವ ಭಾರತೀಯ ಮಿಷನ್‌ಗಳಿಂದ ಸರಣಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಇಂದು ಬೆಳಗ್ಗೆ ರಾಷ್ಟ್ರ ರಾಜಧಾನಿ ರಾಜ್‌ಘಾಟ್‌ನಲ್ಲಿರುವ ಬಾಪು ಸಮಾಧಿಯಲ್ಲಿ ಸರ್ವಧರ್ಮ ಪ್ರಾರ್ಥನಾ ಸಭೆ ನಡೆಯಲಿದೆ. ಇಂದು ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮದಿನವೂ ಆಗಿದ್ದು ದೇಶವು ಅವರನ್ನು ಸ್ಮರಿಸುತ್ತಿದೆ.

**<><*<><>*><>**

ಸತ್ಯ, ಅಹಿಂಸೆ, ಪ್ರೀತಿ ಮತ್ತು ಪರಿಶುದ್ಧತೆಯ ಮೌಲ್ಯಗಳನ್ನು ಅಳವಡಿಸಿಕೊಂಡು, ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಕನಸಿನ ಭಾರತದ ಕಲ್ಪನೆಯನ್ನು ಸಾಕಾರಗೊಳಿಸಬೇಕು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಜನತೆಗೆ ಕರೆ ನೀಡಿದ್ದಾರೆ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ೧೫೫ನೇ ಜನ್ಮದಿನಾಚರಣೆ ಸಂದರ್ಭದಲ್ಲಿ ಶ್ರದ್ಧಾಂಜಲಿ ಸಲ್ಲಿಸಿದ ರಾಷ್ಟ್ರಪತಿ ಅವರು, ದೇಶ ಮತ್ತು ಸಮಾಜದ ಅಭಿವೃದ್ಧಿಯನ್ನು ನಿರಂತರವಾಗಿ ಮುನ್ನಡೆಸಲು ಶ್ರಮಿಸುವಂತೆ ಕರೆ ನೀಡಿದರು. ಸತ್ಯ ಮತ್ತು ಅಹಿಂಸೆಯ ಕಟ್ಟಾ ಅನುಯಾಯಿಯಾಗಿದ್ದ ಬಾಪು ಅವರ ಜೀವನ ಇಡೀ ಮಾನವಕುಲಕ್ಕೆ ಒಂದು ಅನನ್ಯ ಸಂದೇಶವಾಗಿದೆ. ಮಹಾತ್ಮಾ ಗಾಂಧಿಯವರು ಶಾಂತಿ ಮತ್ತು ಸಹಕಾರದ ಮಾರ್ಗವನ್ನು ಅನುಸರಿಸಲು ಜನರನ್ನು ಪ್ರೇರೇಪಿಸಿದರು ಎಂದು ತಿಳಿಸಿದ್ದಾರೆ. ಗಾಂಧೀಜಿಯವರು ಅಸ್ಪೃಶ್ಯತೆ, ಅನಕ್ಷರತೆ, ನೈರ್ಮಲ್ಯದ ಕೊರತೆ ಮತ್ತು ಇತರ ಸಾಮಾಜಿಕ ಅನಿಷ್ಟಗಳನ್ನು ತೊಡೆದುಹಾಕಲು ಪರಿಶ್ರಮಿಸಿದರು. ಜತೆಗೆ ಮಹಿಳಾ ಸಬಲೀಕರಣದ ಉದ್ದೇಶವನ್ನು ಅವಿರತವಾಗಿ ಪ್ರತಿಪಾದಿಸಿದರು ಎಂದು ತಿಳಿಸಿದ್ದಾರೆ. ದುರ್ಬಲ ಮತ್ತು ಅತ್ಯಂತ ದುರ್ಬಲರನ್ನು ಬಲಪಡಿಸುವತ್ತ ಬಾಪು ಅವರ ಹೋರಾಟ ಕೇಂದ್ರೀಕೃತವಾಗಿತ್ತು. ಅವರ ಆಲೋಚನೆಗಳು ಪ್ರಪಂಚದ ಅನೇಕ ಮಹನೀಯರ ಮೇಲೆ ಪ್ರಭಾವ ಬೀರಿದ್ದು, ಗಾಂಧೀಜಿಯವರ ಆದರ್ಶಗಳನ್ನು ತಮ್ಮ ವಿಧಾನಗಳಲ್ಲಿ ಅಳವಡಿಸಿಕೊಂಡಿದ್ದಾರೆ ಎಂದು ಹೇಳಿದ್ದಾರೆ.

**<><*<><>*><>**

೧೫೫ನೇ ಗಾಂಧಿ ಜಯಂತಿಯ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನವದೆಹಲಿಯಲ್ಲಿಂದು ಬೆಳಗ್ಗೆ ನಡೆಯಲಿರುವ 'ಸ್ವಚ್ಛ ಭಾರತ್ ದಿವಸ್ ೨೦೨೪' ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿಸುವ ಉದ್ದೇಶದೊಂದಿಗೆ ದೇಶಾದ್ಯಂತ ಆರಂಭಿಸಲಾದ ಸಾಮೂಹಿಕ ಅಭಿಯಾನಗಳಲ್ಲಿ ಒಂದಾದ 'ಸ್ವಚ್ಛ

ಭಾರತ್ ಮಿಷನ್' ಇಂದಿಗೆ ೧೦ ವರ್ಷಗಳನ್ನು ಪೂರೈಸಿದೆ. ಕಾರ್ಯಕ್ರಮದಲ್ಲಿ ೯ ಸಾವಿರದ ೬೦೦ ಕೋಟಿ ರೂಪಾಯಿಗಳ ಮೌಲ್ಯದ ನೈರ್ಮಲ್ಯ ಮತ್ತು ಸ್ವಚ್ಛತೆಗೆ ಸಂಬಂಧಿಸಿದ ಹಲವಾರು ಯೋಜನೆಗಳಿಗೆ ಪ್ರಧಾನಿ ಚಾಲನೆ ನೀಡಲಿದ್ದಾರೆ. ಇವುಗಳಲ್ಲಿ ಅಮೃತ್ ಮತ್ತು ಅಮೃತ್ ೨.೦ ಅಡಿಯಲ್ಲಿ ಗಂಗಾ ಸ್ವಚ್ಛತೆಗಾಗಿ ರಾಷ್ಟ್ರೀಯ ಮಿಷನ್ ಮತ್ತು ಗೋವರ್ಧನ್ ಯೋಜನೆಯಡಿಯಲ್ಲಿ ೧೫ ಸಂಕುಚಿತ ಜೈವಿಕ ಅನಿಲ ಸ್ಥಾವರ ಯೋಜನೆಗಳು ಸೇರಿವೆ. 'ಸ್ವಚ್ಛ ಭಾರತ್ ದಿವಸ್' ಕಾರ್ಯಕ್ರಮವು, ಭಾರತದ ದಶಕದ ಅವಧಿಯ ನೈರ್ಮಲ್ಯ ಸಾಧನೆಗಳನ್ನು ಮತ್ತು ಇತ್ತೀಚೆಗೆ ಮುಕ್ತಾಯಗೊಂಡ 'ಸ್ವಚ್ಛತಾ ಹಿ ಸೇವಾ' ಅಭಿಯಾನವನ್ನು ಪ್ರದರ್ಶಿಸಲಿದೆ. ಇದು ಸ್ಥಳೀಯ ಆಡಳಿತ ಸಂಸ್ಥೆಗಳು, ಮಹಿಳಾ ಗುಂಪುಗಳು, ಯುವ ಸಂಘಟನೆಗಳು ಮತ್ತು ಸಮುದಾಯದ ಮುಖಂಡರ ರಾಷ್ಟ್ರವ್ಯಾಪಿ ಭಾಗವಹಿಸುವಿಕೆಯನ್ನು ಒಳಗೊಂಡಿರುತ್ತದೆ, ಸಂಪೂರ್ಣ ಸ್ವಚ್ಛತಾ ಮನೋಭಾವವು ಭಾರತದ ಮೂಲೆ ಮೂಲೆಯನ್ನು ತಲುಪುತ್ತದೆ ಎಂದು ಖಚಿತಪಡಿಸುತ್ತದೆ. ಸ್ವಚ್ಛತಾ ಹಿ ಸೇವಾ ೨೦೨೪ ರ ಥೀಮ್, 'ಸ್ವಭಾವ ಸ್ವಚ್ಛತಾ, ಸಂಸ್ಕಾರ ಸ್ವಚ್ಛತಾ', ಸ್ವಚ್ಛತೆ, ಸಾರ್ವಜನಿಕ ಆರೋಗ್ಯ ಮತ್ತು ಪರಿಸರ ಸುಸ್ಥಿರತೆಗೆ ತನ್ನ ಬದ್ಧತೆಯಲ್ಲಿ ಮತ್ತೊಮ್ಮೆ ರಾಷ್ಟ್ರವನ್ನು ಒಂದುಗೂಡಿಸಿದೆ. 'ಸ್ವಚ್ಛತಾ ಹಿ ಸೇವಾ ೨೦೨೪' ರ ಅಡಿಯಲ್ಲಿ, ೧೭ ಕೋಟಿಗೂ ಹೆಚ್ಚು ಜನರ ಭಾಗವಹಿಸುವಿಕೆಯೊಂದಿಗೆ ೧೯ ಲಕ್ಷಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಪೂರ್ಣಗೊಳಿಸಲಾಗಿದೆ. ಸುಮಾರು ೬.೫ ಲಕ್ಷ ಸ್ವಚ್ಛತೆ ಗುರಿ ಘಟಕಗಳ ಪರಿವರ್ತನೆಯನ್ನು ಸಾಧಿಸಲಾಗಿದೆ. ಸುಮಾರು ಒಂದು ಲಕ್ಷ ಸಫಾಯಿ ಮಿತ್ರ ಸುರಕ್ಷಾ ಶಿಬಿರಗಳನ್ನು ಸಹ ಆಯೋಜಿಸಲಾಗಿದೆ, ೩೦ ಲಕ್ಷಕ್ಕೂ ಹೆಚ್ಚು ಸಫಾಯಿ ಕರ್ಮಚಾರಿಗಳು ಪ್ರಯೋಜನ ಪಡೆಯುತ್ತಿದ್ದಾರೆ. 'ಏಕ್ ಪೇಡ್ ಮಾ ಕೆ ನಾಮ್' ಅಭಿಯಾನದಡಿ ೪೫ ಲಕ್ಷ ಮರಗಳನ್ನು ನೆಡಲಾಗಿದೆ.

<><*<><>*><>

ನವದೆಹಲಿಯಲ್ಲಿ ನಿನ್ನೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಜಮೈಕಾ ಪ್ರಧಾನಿ ಡಾಕ್ಟರ್ ಆಂಡ್ರ್ಯೂ ಹೋಲ್ನೆಸ್ ನಡುವೆ ನಿಯೋಗಗಳ ಮಟ್ಟದ ಮಾತುಕತೆ ನಡೆಯಿತು. ಈ ಸಂದರ್ಭದಲ್ಲಿ ಭಾರತ ಮತ್ತು ಜಮೈಕಾ ನಡುವೆ ನಿನ್ನೆ ಡಿಜಿಟಲ್ ಮೂಲಸೌಕರ್ಯ, ಸಾಂಸ್ಕೃತಿಕ ವಿನಿಮಯ ಮತ್ತು ಕ್ರೀಡಾ ಕ್ಷೇತ್ರದಲ್ಲಿ ಸಹಕಾರ ಕುರಿತಂತಹ ತಿಳುವಳಿಕಾ ಒಪ್ಪಂದಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು. ಬಳಿಕ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಜಮೈಕಾದ ಪ್ರಧಾನಿಯವರ ಭೇಟಿಗೆ ಭಾರತ ವಿಶೇಷ ಪ್ರಾಮುಖ್ಯತೆಯನ್ನು ನೀಡುತ್ತದೆ. ಭಾರತ ಮತ್ತು ಜಮೈಕಾ ಸಂಬಂಧಗಳು ತಮ್ಮ ಇತಿಹಾಸ, ಪ್ರಜಾಸತ್ತಾತ್ಮಕ ಮೌಲ್ಯಗಳು ಮತ್ತು ಬಲವಾದ ಜನರಿಂದ ಜನರ ಸಂಬಂಧಗಳನ್ನು ಆಧರಿಸಿವೆ ಎಂದರು. ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ, ಸಣ್ಣ ಪ್ರಮಾಣದ ಕೈಗಾರಿಕೆಗಳು, ಜೈವಿಕ ಇಂಧನ, ನಾವೀನ್ಯತೆ, ಆರೋಗ್ಯ, ಶಿಕ್ಷಣ ಮತ್ತು ಕೃಷಿಯಂತಹ ಕ್ಷೇತ್ರಗಳಲ್ಲಿ ಜಮೈಕಾದೊಂದಿಗೆ ತನ್ನ ಅನುಭವವನ್ನು ಹಂಚಿಕೊಳ್ಳಲು ಭಾರತ ಸಿದ್ಧವಿದೆ. ರಕ್ಷಣಾ ಕ್ಷೇತ್ರದಲ್ಲಿ ಜಮೈಕಾ ಸೇನೆಯ ತರಬೇತಿ ಮತ್ತು ಸಾಮರ್ಥ್ಯ ವೃದ್ಧಿಯಲ್ಲಿ ಸಹಕಾರವನ್ನು ಭಾರತ ಮುಂದುವರಿಸಲಿದೆ ಎಂದು ಅವರು ಹೇಳಿದರು.

<><*<><>*><>

ಭಾರತೀಯ ನೌಕಾಪಡೆ ನಡೆಸುವ ನಾವಿಕ ಸಾಗರ್ ಪರಿಕ್ರಮದ ಎರಡನೇ ಆವೃತ್ತಿಗೆ ಇಂದು ಚಾಲನೆ ದೊರೆಯಲಿದೆ. ಭಾರತೀಯ ನೌಕಾಪಡೆಯ ತಾರಿಣಿ ನೌಕೆಯಲ್ಲಿ ಮಹಿಳಾ ಅಧಿಕಾರಿಗಳಾದ ಲೆಫ್ಟಿನೆಂಟ್ ಕಮಾಂಡರ್ ದಿಲ್ನಾ ಕೆ ಮತ್ತು ಲೆಫ್ಟಿನೆಂಟ್ ಕಮಾಂಡರ್ ರೂಪಾ.ಎ ಈ ಐತಿಹಾಸಿಕ ಪ್ರಯಾಣವನ್ನು ಕೈಗೊಳ್ಳಲಿದ್ದಾರೆ. ಎಂಟು ತಿಂಗಳ ಅವಧಿಯಲ್ಲಿ, ಇಬ್ಬರೂ ಅಧಿಕಾರಿಗಳು ಇಪ್ಪತ್ತೊಂದು ಸಾವಿರದ ಆರುನೂರು ನಾಟಿಕಲ್ ಮೈಲುಗಳಿಗಿಂತ ಹೆಚ್ಚು ಸಾಗರ ಪರಿಕ್ರಮ ಕೈಗೊಳ್ಳಲಿದ್ದಾರೆ. ಈ ಸಾಗರ ಪ್ರದಕ್ಷಿಣೆಯು ಅಧಿಕಾರಿಗಳ ಅಸಾಧಾರಣ ಶೌರ್ಯ, ಧೈರ್ಯ ಮತ್ತು ಪರಿಶ್ರಮವನ್ನು ಎತ್ತಿ ತೋರಿಸುತ್ತದೆ. ಕೇಪ್ ಲೀವಿನ್, ಕೇಪ್ ಹಾರ್ನ್ ಮತ್ತು ಕೇಪ್ ಆಫ್ ಗುಡ್ ಹೋಪ್ - ಮೂರು ಕೇಪ್‌ಗಳ ಸುತ್ತಲಿನ ಅಪಾಯಕಾರಿ ಹಾದಿಯನ್ನು ಅವರ ಪ್ರಯಾಣ ಮಾರ್ಗ ಒಳಗೊಂಡಿದೆ. ಈ ಪ್ರಯಾಣ, ಭಾರತೀಯ ನೌಕಾಪಡೆಯ ನಾರಿ ಶಕ್ತಿಗೆ ಅವರ ಮನೋಭಾವ ಮತ್ತು ನಿರ್ಣಯವನ್ನು ಪ್ರದರ್ಶಿಸುವ ಬದ್ಧತೆಯ ಆಚರಣೆಯಾಗಿದೆ. ೨೦೧೭ ರಲ್ಲಿ ಭಾರತೀಯ ನೌಕಾಪಡೆ ಸಂಘಟಿಸಿದ ಉದ್ಘಾಟನಾ ನಾವಿಕ ಸಾಗರ್ ಪರಿಕ್ರಮ, ಆರು ಮಹಿಳಾ ಅಧಿಕಾರಿಗಳೊಂದಿಗೆ ಸಂಪೂರ್ಣ ಮಹಿಳಾ ಸಿಬ್ಬಂದಿಯೇ ಇರುವ ಜಗತ್ತಿನ ಮೊದಲ ಭಾರತೀಯ ಪರಿಕ್ರಮವಾಗಿದೆ.

<><*<><>*><>

ಜಮ್ಮು ಮತ್ತು ಕಾಶ್ಮೀರದಲ್ಲಿ ನಿನ್ನೆ ನಡೆದ ಮೂರನೇ ಮತ್ತು ಕೊನೆಯ ಹಂತದ ವಿಧಾನಸಭಾ ಚುನಾವಣೆಯಲ್ಲಿ ಶೇಕಡ ೬೫.೬೫ ರಷ್ಟು ಮತದಾನವಾಗಿದೆ. ಉತ್ಸಾಹಿ ಮತದಾರರು ತಮ್ಮ ಹಕ್ಕು ಚಲಾಯಿಸಲು ಸರತಿ ಸಾಲಿನಲ್ಲಿ ಮತ

ಚಲಾಯಿಸಿದ್ದಾರೆ ಎಂದು ಆಕಾಶವಾಣಿ ಜಮ್ಮು ವರದಿಗಾರರು ವರದಿ ಮಾಡಿದ್ದಾರೆ. ಜಮ್ಮು ವಿಭಾಗದ ಒಟ್ಟು ೨೪ ವಿಧಾನಸಭಾ ಕ್ಷೇತ್ರಗಳಲ್ಲಿ ಜಮ್ಮು ಜಿಲ್ಲೆಯ ಛಂಬ್ ವಿಧಾನಸಭಾ ಕ್ಷೇತ್ರದಲ್ಲಿ ಗರಿಷ್ಠ ಅಂದರೆ, ಶೇಕಡಾ ೭೭.೩೫ ರಷ್ಟು ಹಾಗೂ ಸೋಪೋರ್ ವಿಧಾನಸಭಾ ಕ್ಷೇತ್ರದಲ್ಲಿ ಕನಿಷ್ಠ ಶೇಕಡ ೪೧.೪೪ ರಷ್ಟು ಮತದಾನ ಪ್ರಮಾಣ ದಾಖಲಾಗಿದೆ. ಹಲವು ಕ್ಷೇತ್ರಗಳಲ್ಲಿ ಉತ್ತಮ ಮತದಾನ ಪ್ರಮಾಣ ದಾಖಲಾಗಿದ್ದು, ಅಖ್ನೂರ್ ೭೬.೨೮ ಮಾರ್ಹ್ ೭೬.೧೦, ಬಂಡಿಪುರ್ ೭೫.೮೯ ಗುರೇಸ್ ಕ್ಷೇತ್ರದಲ್ಲಿ ಶೇಕಡ ೭೫.೮೯, ಚೆನಾನಿ ೭೩, ಪೂರ್ವ ಉದಂಪುರ್ ೭೪, ಪಶ್ಚಿಮ ಉದಂಪುರ್ ೭೩, ಸಾಂಬ ೭೩, ವಿಜಯ್‌ಪುರ್ ೭೩, ಬಿಷ್ನಾಹ್ ೭೨, ಬನಿ ೭೧, ಕರ್ನಾಹ್ ೬೬, ಟ್ರೆಗಾಮ್ ೬೨, ಕುಪ್ವಾರದಲ್ಲಿ ೫೯, ಜಮ್ಮು ಪಶ್ಚಿಮ ವಿಧಾನಸಭಾ ಕ್ಷೇತ್ರದಲ್ಲಿ ಶೇಕಡಾ ೫೬ ರಷ್ಟು ಮತದಾನ ದಾಖಲಾಗಿದೆ. ಏಳು ಜಿಲ್ಲೆಗಳ ೪೦ ವಿಧಾನಸಭಾ ಕ್ಷೇತ್ರಗಳ ೫ ಸಾವಿರದ ೬೦ ಮತಗಟ್ಟೆಗಳಲ್ಲಿ ಬಿಗಿ ಭದ್ರತೆಯ ನಡುವೆ ಮತದಾನ ನಡೆಯಿತು. ೩೭೦ ವಿಧಿ ರದ್ದಾದ ನಂತರ ಇಲ್ಲಿ ಮೊದಲ ಬಾರಿಗೆ ಚುನಾವಣೆ ನಡೆಯುತ್ತಿದೆ. ಸೆಪ್ಟೆಂಬರ್ ೧೮ ಮತ್ತು ಸೆಪ್ಟೆಂಬರ್ ೨೫ ರಂದು ನಡೆದ ಮೊದಲ ಎರಡು ಹಂತದ ವಿಧಾನಸಭಾ ಚುನಾವಣೆಯಲ್ಲಿ ಶೇಕಡಾ ೫೭ ಕ್ಕಿಂತ ಹೆಚ್ಚು ಮತದಾನವಾಗಿದೆ. ಮತಗಳ ಎಣಿಕೆ ಅಕ್ಟೋಬರ್ ೮ ರಂದು ನಡೆಯಲಿದೆ.

**<><*<><>*><>**

ಕೇಂದ್ರ ಭಾರೀ ಕೈಗಾರಿಕೆಗಳ ಸಚಿವ ಹೆಚ್.ಡಿ.ಕುಮಾರಸ್ವಾಮಿ ನಿನ್ನೆ ನವದೆಹಲಿಯಲ್ಲಿ Pಒ ಇ-ಆಖIಗಿಇ ಯೋಜನೆಗೆ ಚಾಲನೆ ನೀಡಿದರು. ನಂತರ ಮಾತನಾಡಿದ ಸಚಿವರು, ಈ ಉಪಕ್ರಮ ದೇಶಾದ್ಯಂತ ಎಲೆಕ್ಟ್ರಿಕ್ ವಾಹನ ಅಳವಡಿಕೆಯನ್ನು ವೇಗಗೊಳಿಸುತ್ತದೆ ಮತ್ತು ದೇಶೀಯ ಆವಿಷ್ಕಾರವನ್ನು ಉತ್ತೇಜಿಸುತ್ತದೆ ಎಂದು ಪ್ರತಿಪಾದಿಸಿದರು. ಈ ಯೋಜನೆಯು ಎರಡು ವರ್ಷಗಳ ಅವಧಿಯಲ್ಲಿ ೧೦ ಸಾವಿರದ ೯೦೦ ಕೋಟಿ ರೂಪಾಯಿಗಳ ಆರ್ಥಿಕ ವೆಚ್ಚವನ್ನು ಹೊಂದಿದೆ ಎಂದು ತಿಳಿಸಿದರು. ಇ-ದ್ವಿಚಕ್ರ ವಾಹನಗಳು, ಇ-ತ್ರಿಚಕ್ರ ವಾಹನಗಳು, ಇ-ಆಂಬುಲೆನ್ಸ್‌ಗಳು, ಇ-ಟ್ರಕ್‌ಗಳು ಮತ್ತು ಉದಯೋನ್ಮುಖ ಎಲೆಕ್ಟ್ರಿಕ್ ವಾಹನಗಳಿಗೆ ಸುಮಾರು ೩ ಸಾವಿರದ ೬೮೦ ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು. ಇ-ಆಂಬ್ಯುಲೆನ್ಸ್‌ಗಳ ನಿಯೋಜನೆಗೆ ೫೦೦ ಕೋಟಿ ರೂಪಾಯಿ, ಸುಮಾರು ೧೪ ಸಾವಿರ ಇ-ಬಸ್‌ಗಳ ಖರೀದಿಗೆ ೪ ಸಾವಿರದ ೩೯೧ ಕೋಟಿ ರೂಪಾಯಿ ಮತ್ತು ಫಾಸ್ಟ್ ಚಾರ್ಜರ್‌ಗಳನ್ನು ಸ್ಥಾಪಿಸಲು ೨ ಸಾವಿರ ಕೋಟಿ ರೂಪಾಯಿ ಮೊತ್ತವನ್ನು ವಿವಿಧ ಹಂಚಿಕೆಗಳನ್ನು ಒಳಗೊಂಡಂತೆ ವಿನಿಯೋಗಿಸಲಾಗಿದೆ ಎಂದು ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು. ಎಲೆಕ್ಟ್ರಿಕ್ ವಾಹನ ಖರೀದಿದಾರರಿಗೆ ಬೇಡಿಕೆಯ ಪ್ರೋತ್ಸಾಹವನ್ನು ಪಡೆಯಲು ಆಧಾರ್-ದೃಢೀಕೃತ ಇ-ವೋಚರ್‌ಗಳನ್ನು ಪರಿಚಯಿಸಲಾಗುವುದು. ಇ-ವೋಚರ್‌ಗಳು ಗ್ರಾಹಕರು ಮತ್ತು ತಯಾರಕರಿಬ್ಬರಿಗೂ ತಡೆರಹಿತ ಅನುಭವವನ್ನು ನೀಡಲಿದೆ ಎಂದರು.

**<><*<><>*><>**

ಇದೇ ೮ ರಂದು ತಾಂಬರಂ ವಾಯುಪಡೆ ನೆಲೆಯಲ್ಲಿ ವಾಯುಪಡೆಯ ದಿನದ ಪರೇಡ್ ನಡೆಯಲಿದೆ ಎಂದು ಭಾರತೀಯ ವಾಯುಪಡೆಯ ತಾಂಬರಂನ ಏರ್ ಆಫೀಸರ್ ಕಮಾಂಡಿಂಗ್ ಏರ್ ಕಮೋಡೋರ್ ರತೀಶ್ ಕುಮಾರ್ ಹೇಳಿದ್ದಾರೆ.

**<><*<><>*><>**

ಕಾನ್ಪುರದಲ್ಲಿ ನಡೆದ ಎರಡು ಪಂದ್ಯಗಳ ಸರಣಿಯ, ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಭಾರತವು ಬಾಂಗ್ಲಾದೇಶವನ್ನು ಏಳು ವಿಕೆಟ್‌ಗಳಿಂದ ಸೋಲಿಸಿದೆ. ಈ ಗೆಲುವಿನೊಂದಿಗೆ ಭಾರತ ಎರಡು ಪಂದ್ಯಗಳ ಸರಣಿಯನ್ನು ೨-೦ ಅಂತರದಲ್ಲಿ ಕ್ಲೀನ್‌ಸ್ವೀಪ್ ಮಾಡಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಅಪರಾಹ್ನ ೧.೧೦ ಕ್ಕೆ <>*><>**